ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ; ನ್ಯಾಯಾಲಯ,
ಶ್ರೀರಂಗಪಟ್ಟಣ.

ಸಿ.ಸಿ.ಃ 388/2018

ಪಿ. ಡಬ್ಲ್ಯುಃ 03
ಸಿ. ಡಬ್ಲ್ಯುಃ 03

| | | |
|---|---|---|
| ಸಾಕ್ಷಿದಾರರ ಹೆಸರು | ಃ | ಕೆ.ಎಂ.ಶಿವಣ್ಣ |
| ತಂದೆ/ಪತಿಯ ಹೆಸರು | ಃ | ಲೇಟ್ ಮಂಚನಾಯಕ್ |
| ವಯಸ್ಸು | ಃ | 58 ವರ್ಷ |
| ವೃತ್ತಿ | ಃ | ಆರಕ್ಷಕ ಉಪನಿರೀಕ್ಷಕರು, ಮೈಸೂರು |
| | | ಕೆ.ಎಸ್.ಆರ್.ಪಿ. |
| ವಾಸ | ಃ | ಮೈಸೂರು |

ಸಾಕ್ಷಿಗೆ ಪ್ರಮಾಣ ವಚನ ಮಾಡಿಸಿದ ದಿನಾಂಕಃ 12.07.2022

ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ

ನಾನು 2017 ರಿಂದ ನಾಲ್ಕು ವರ್ಷಗಳ ಕಾಲ ಕೆ.ಆರ್.ಎಸ್. ಕೈಗಾರಿಕಾ ಭದ್ರತಾ ಪಡೆಯಲ್ಲಿ ಎ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ. ಚಾಸಾ.1 ಮತ್ತು ಚಾಸಾ.2 ನನಗೆ ಗೊತ್ತು.

2018 ಮಾರ್ಚ 13 ರಂದು ಬೃಂದಾವನ ಗಾರ್ಡನ ಬೋಟಿಂಗ್ ಪಾಯಿಂಟ್ ಹತ್ತಿರ ಚಾಸಾ.1 ಮತ್ತು ಚಾಸಾ.2 ಕರ್ತವ್ಯಕ್ಕೆ ನೇಮಿಸಲಾಗಿತ್ತು. ಅವರ ಕರ್ತವ್ಯದ ಅವಧಿ ಬೆಳಿಗ್ಗೆ 08.00-02.00 ವರೆಗೆ ಇತ್ತು.

ಸದರಿ ದಿನ ಮಧ್ಯಾಹ್ನ 12.00 ಸಮಯದಲ್ಲಿ ಬೋಟಿಂಗ್ ಪಾಯಿಂಟ್ ಹತ್ತಿರವಿರುವ ಮಹಿಳಾ ಶೌಚಾಲಯಕ್ಕೆ ಚಾಸಾ.1 ಮತ್ತು ಚಾಸಾ.2 ಹೋಗಿದ್ದರು. ಮಹಿಳಾ ಶೌಚಾಲಯದಲ್ಲಿದ್ದಾಗ ಒಬ್ಬ ವ್ಯಕ್ತಿ ಅಲ್ಲಿ ಪದೇ ಪದೇ ಒಳಗೆ ಬಂದು ತೊಂದರೆ ನೀಡಿದ್ದ ಬಗ್ಗೆ ನನಗೆ ಬಂದು ಚಾಸಾ.1 ಮತ್ತು ಚಾಸಾ.2 ತಿಳಿಸಿದರು. ಮಹಿಳಾ ಶೌಚಾಲಯಕ್ಕೆ ಹೋಗಿ ಚಾಸಾ.1 ಮತ್ತು 2 ರವರಿಗೆ ತೊಂದರೆ ನೀಡಿದ್ದ ವ್ಯಕ್ತಿ ನಿಶ್ಚಿತ್ ಎನ್ನುವರಾಗಿದ್ದು ಪ್ರಸನ್ನ ಕುಮಾರ್ ಎನ್ನುವವರ ಮಗನಾಗಿರುತ್ತಾರೆ ಎಂದು ಗೊತ್ತಾಯಿತು.

ನಿಶ್ಚಿತ್ ನನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ಈ ದಿನ ನ್ಯಾಯಾಲಯದ ಮುಂದಿರುವ ಸಾಕ್ಷಿಯನ್ನು ನೋಡಿ ಗುರುತಿಸಿರುತ್ತಾರೆ.

**<u>ಪಾಟಿ ಸವಾಲುಃ ಆರೋಪಿ ಪರ ಮಾನ್ಯ ಸಿ.ಆರ್.ಎಸ್. ವಕೀಲರಿಂದ</u>**

ಚಾಸಾ.1 ಮತ್ತು ಚಾಸಾ.2 ರವರು ಘಟನೆ ಬಗ್ಗೆ ತಿಳಿಸಿದ್ದನ್ನು ಬಿಟ್ಟರೆ ನನಗೆ ಪ್ರತ್ಯಕ್ಷ ಘಟನೆ ಬಗ್ಗೆ ಮಾಹಿತಿ ಇಲ್ಲವೆಂದರೆ ನನಗೆ ಘಟನೆ ಬಗ್ಗೆ ಗೊತ್ತಿದೆ ಎಂದು ನುಡಿಯುತ್ತಾರೆ. ಘಟನೆಯನ್ನು ನಾನು ಖುದ್ದು ನೋಡಿರುತ್ತೇನೆ ಆದರೆ ನಾನು ಅಲ್ಲಿಗೆ ಹೋಗಿ ಜಗಳ ಬಿಡಿಸಲು ಪ್ರಯತ್ನ ಮಾಡಿರುವುದಿಲ್ಲ. ಗಲಾಟೆ ನಡೆದ ಸಮಯದಲ್ಲಿ ಚಾಸಾ.1, ಚಾಸಾ.2 ಮತ್ತು ನನ್ನನ್ನು ಹೊರತು ಪಡಿಸಿ ಬೇರೆ ಯಾರು ಇರಲಿಲ್ಲ. ಆ ದಿನ ನಾನು ಚಾಸಾ.1, ಚಾಸಾ.2 ರವರು ಬೆಳಿಗ್ಗೆ 08.00- 02.00 ವರೆಗೆ ಕರ್ತವ್ಯ ನಿರ್ವಹಿಸಿದ್ದೇವೆ.

ಗಲಾಟೆ ನಡೆದ ಬಗ್ಗೆ ತಕ್ಷಣವೇ ಕೆ.ಅರ್.ಎಸ್. ಪೋಲೀಸ್ ಠಾಣೆ ಹೋಗಿ ಪೋಲೀಸರಿಗೆ ತಿಳಿಸಿ ದೂರು ದಾಖಲು ಮಾಡಿರುತ್ತೇವೆ. ನಾನು ಗಲಾಟೆ ನಡೆಯಿತು ಎನ್ನುವ ಸಮಯದಲ್ಲಿ ಘಟನಾ ಸ್ದಳದಲ್ಲಿ ಇರಲಿಲ್ಲ ಮತ್ತು ಯಾವುದೇ ಘಟನೆ ನನ್ನ ಸಮಕ್ಷಮ ನಡೆದಿಲ್ಲ ಅದರೂ ಕೂಡ ನಮ್ಮ ಸಿಬ್ಬಂದಿಗಳಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಹೇಳಿಕೆ ನೀಡಿ ಅದಕ್ಕೆ ಪೂರಕವಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ನನ್ನ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆಎಂಎಫ್‌ಸಿ., ಶ್ರೀರಂಗಪಟ್ಟಣ.